ಹೇಳುವಾಗಲೂ 'ಅವರ ತರಗತಿಗಳನ್ನು ಮಾತ್ರ ನಾವೆಂದೂ ತಪ್ಪಿಸುತ್ತಿರಲಿಲ್ಲ' ಎಂದುದಿದೆ. ಭಟ್ಟರ ಅಧ್ಯಾಪನದ ಶಿಸ್ತು, ಹರಹು ಮತ್ತು ತಮ್ಮ ವಿದ್ಯಾರ್ಥಿಗಳ ಕುರಿತು ಅವರಿಗಿದ್ದ ಪ್ರೀತಿಯನ್ನು ತೋರುವ ಮಾತು ಇದು ಎಂದುಕೊಂಡಿದ್ದೇನೆ. ಭಟ್ಟರು ಅನೇಕ ಜಗಳಗಳಿಂದ ಸಾಹಿತ್ಯಲೋಕವನ್ನು ಚುರುಕಾಗಿಟ್ಟರೆಂದೂ, ತಮಗಿಂತ ಎಷ್ಟೋ ಕಿರಿಯರಾದವರನ್ನೂ ಅವರು ಸಮಾನವಾಗಿ ಕಂಡರೆಂದೂ ಈಗ ತೋರುತ್ತದೆ.

ಲಕ್ಷ್ಮೀನಾರಾಯಣ ಭಟ್ಟರು ಶಿವಮೊಗ್ಗದಲ್ಲಿ ಹುಟ್ಟಿ ಬೆಳೆದವರಾದರೂ ಅವರ ಪೂರ್ವಜರು ಕುಂದಾಪುರದ ಬಳಿಯ ನೈಲಾಡಿಯವರು. ತಮ್ಮ ಎರಡನೇ ವರ್ಷದ ಹೊತ್ತಿಗೇ ಭಟ್ಟರು ತಂದೆಯವರನ್ನು ಕಳೆದುಕೊಂಡರು. ಕಷ್ಟಪಟ್ಟು ದುಡಿದು ತಾಯಿ ಮಕ್ಕಳನ್ನು ಬೆಳೆಸಿದರು. 'ನನ್ನ ತಾಯಿಯ ಬದುಕು ಮಕ್ಕಳಿಗಾಗಿ ಆಕೆ ನಡೆಸಿದ ಒಂದು ಆತ್ಮಯಜ್ಞ' ಎಂದು ಭಟ್ಟರು ನೆನೆದಿದ್ದಾರೆ. ಶಿವಮೊಗ್ಗದಲ್ಲಿ ಅವರು ಇಂಟರ್‌ಮೀಡಿಯೆಟ್ ವರೆಗೆ ಓದಿದರು. ಮುಂದಿನ ಓದಿಗೆ ಅವರು ಮೈಸೂರಿಗೆ ಬಂದರು. ವಾರಾನ್ನ ಮಾಡಿಕೊಂಡು ಓದಿದರು. ತೀ.ನಂ.ಶ್ರೀ, ಡಿ.ಎಲ್.ಎನ್., ತ.ಸು. ಶಾಮರಾವ್ ಇಂಥ ಪ್ರಸಿದ್ಧ ಅಧ್ಯಾಪಕರ ಮೆಚ್ಚಿನ ಶಿಷ್ಯರಾಗಿ ಬಿ.ಎ. ಆನರ್ಸ್ ಮತ್ತು ಎಂ.ಎ. ಪರೀಕ್ಷೆಗಳಲ್ಲಿ ರ‍್ಯಾಂಕ್ ಪಡೆದು ಉತ್ತೀರ್ಣರಾದರು. ಮುಂದೆ ಅಧ್ಯಾಪಕರಾಗಿ ಬೆಂಗಳೂರಿನಲ್ಲಿ ವೃತ್ತಿಜೀವನ ಆರಂಭಿಸಿ ಇಲ್ಲೇ ನಿವೃತ್ತರಾದರು.

ಭಟ್ಟರ ಮೊದಲ ಕವನ ಸಂಕಲನಕ್ಕೆ ಮುನ್ನುಡಿ ಬರೆದ ಕವಿ ಜಿ.ಎಸ್. ಶಿವರುದ್ರಪ್ಪನವರು, 'ಇಲ್ಲಿಯ ಕವಿತೆಗಳಲ್ಲಿ ಅಬ್ಬರವಿಲ್ಲ; ಆಡಂಬರವಿಲ್ಲ. ನಾವೀನ್ಯವನ್ನು ತರಬೇಕೆಂಬ ಪ್ರಜ್ಞಾಪೂರ್ವಕವಾದ ಹಂಬಲದ ಚಮತ್ಕಾರಗಳಿಲ್ಲ. ತಮ್ಮ ಸ್ವಧರ್ಮಕ್ಕೆ ವಂಚನೆಯಾಗದ ರೀತಿಯಲ್ಲಿ ತಮಗನಿಸಿದ್ದನ್ನು ನೇರವಾಗಿ ನಿರೂಪಿಸುವ ಕೌಶಲವಿದೆ' ಎಂದಿದ್ದು ಅವರ ಒಟ್ಟಾರೆ ಕಾವ್ಯಕೃಷಿಯ ಕುರಿತೂ ಆಡುವ ಮೌಲ್ಯಮಾಪನದ ಮಾತಾಗಬಹುದು. ಮುಂದಿನ ದಿನಗಳಲ್ಲಿ ಅವರ ಕಾವ್ಯದ ಧನಾತ್ಮಕ ಅಂಶಗಳು ಪರಿಷ್ಕಾರಗೊಳ್ಳುತ್ತ ಹೋದವು. ತಾಯ್ತನದ ಸಿದ್ಧತೆಯಲ್ಲಿರುವ ಹೆಣ್ಣನ್ನು ಕುರಿತ ಅವರ ಸುಪ್ರಸಿದ್ಧ 'ಸೀಮಂತಿನಿ' ಎಂಬ ಪದ್ಯ ಭಟ್ಟರ ಮೊದಲ ಸಂಕಲನದಲ್ಲಿಯೇ ಇದೆ. ಅವರ ಕಾವ್ಯಜೀವನದ ಕಡೆಯ ವರ್ಷಗಳಲ್ಲಿ ಬಂದ 'ಅರುಣಗೀತ' ಒಂದು ಮಹತ್ವಾಕಾಂಕ್ಷೆಯ ರಚನೆ. ದೇವರು ಅಪ್ರಮೇಯನಾಗಿರಬಹುದು, ಆದರೆ ಈ ಕವಿತೆ ಅವನನ್ನು ಅರಿಯಲು ತಾನೂ ಒಂದು ಪ್ರಮೇಯವಾಗಲು ಪ್ರಯತ್ನಿಸುತ್ತಿದೆ ಎಂಬ ಮೆಚ್ಚುಗೆಯ ಉದ್ಗಾರ ವಿಮರ್ಶಕ ಕೀರ್ತಿನಾಥ ಕುರ್ತಕೋಟಿಯವರದು. ಭಟ್ಟರ ಕಾವ್ಯದ ಸೌಂದರ್ಯಾರಾಧನೆ, ವಿಶ್ವಕುತೂಹಲ, ರುಚಿಯುಳ್ಳ ಮಾತುಗಾರಿಕೆ, ಕಾವ್ಯಪರಂಪರೆಯ ಅರಿವಿನಲ್ಲಿ ಇದ್ದುಬಂದ, ಎದ್ದುಬಂದ ಮನಸಿನ ಪಾಕ ಇವೆಲ್ಲವನ್ನೂ ಪರಿಚಯಿಸುವ ಈ ಕಾವ್ಯಭಾಗ ಅವರು ಬರೆದ ಆ ದೀರ್ಘಕವಿತೆಯ ಆರಂಭದ್ದು:

ಕತ್ತೆತ್ತಿದರೆ ಸಾಕು ನಡುರಾತ್ರಿಯಲ್ಲಿ
'ಲಕ್ಷ ನಕ್ಷತ್ರಮಯ ವಕ್ಷಾಂತರಿಕ್ಷ'
ಕುಚುಕದ ಅರೆಮರೆಗೆ ಊರ್ವಶೀವಕ್ಷ!
ನೀಲಿಯಂಗಳದಲ್ಲಿ ಎಲ್ಲೆಂದರಲ್ಲಿ
ಮಿಂಚಿ ಹೊಂಚುವ ಕಣ್ಣು,
ಆಹ! ಇರುಳಿನ ಕೊಕ್ಕಿನಿಂದೆತ್ತಿ
ತಿನ್ನಲಿರಿಸಿದ ಹಣ್ಣು
(ಅರುಣಗೀತ)

ಅವರ ಸಮಗ್ರ ಕಾವ್ಯ ಎರಡು ಸಂಪುಟಗಳಲ್ಲಿದೆ. ಒಟ್ಟು ಸಾವಿರ ಪುಟಗಳನ್ನು ಮೀರುವ ಕಾವ್ಯಸೃಷ್ಟಿ